ಸುಷಮಾಳ ಹೃದಯದಲ್ಲಿ ಬೆಂಗಳೂರು ನಗರದ ಬಗ್ಗೆ ಅತೀವ ಪ್ರೀತಿ–ಆತ್ಮೀಯತೆ ಇರುವುದರಿಂದಲೇ ಮನೆಯವರೆಲ್ಲರ ವಿರೋಧವನ್ನು ಲೆಕ್ಕಿಸದೆ ತನ್ನ ಮಗಳನ್ನು ಬೆಂಗಳೂರಿಗೆ ಸಮೀಪವಿರುವ ವಸತಿ ಶಾಲೆಯಲ್ಲಿ ಓದಿಸುವ ನಿರ್ಧಾರ ಮಾಡಿದ್ದಳು. ಮುಂದೆ ಇದೇ ನಗರ ಬದಲಾವಣೆಯ ಕಾಲದಲ್ಲಿ ಮಗಳು ಅಳಿಯನ ಕರ್ಮಭೂಮಿಯಾಯಿತು.

ಕಳೆದ ಹದಿನೈದು ವರ್ಷಗಳಲ್ಲಿ ಸುಷಮಾ ಹಲವು ಬಾರಿ ಬೆಂಗಳೂರಿಗೆ ಬಂದಿದ್ದಳು. ಕೆಲವು ಬಾರಿ ಯಾವುದೊ ಸೆಮಿನಾರಿನಲ್ಲಿ ಭಾಗವಹಿಸಲು, ಚಿಕಿತ್ಸೆಗೆ, ಏನಿಲ್ಲದಿದ್ದರೂ ಮಗಳು ಅಳಿಯನ ಮನೆಯಲ್ಲಿ ಹಾಯಾಗಿ ನಾಲ್ಕು ದಿನ ಕಳೆಯಲು ಬರುತ್ತಿದ್ದಳು. ಆದರೆ, ಒಂದು ಬಾರಿಯೂ ಅವಳಿಗೆ ತನ್ನ ಬಾಲ್ಯದ ದಿನಗಳನ್ನು ಕಳೆದ ಸುಂದರ ಸ್ವಪ್ನಗಳನ್ನು ನೋಡಿದ ಪರಿಸರಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಆ ಪರಿಸರದಲ್ಲಿ ಅವಳ ಸಿಹಿ ನೆನಪುಗಳು ಹುದುಗಿಕೊಂಡಿದ್ದವು. ಅವಳು ಬಂದಾಗ ಅಲ್ಲಿ ಹೋಗಲು ಪ್ರಯತ್ನಿಸಲಿಲ್ಲ. ಹೋಗಬೇಕೆಂದೆನಿಸಿದರೂ ಹೋಗುವ ಮನಸ್ಸಾಗಲಿಲ್ಲ. ಅಲ್ಲಿ ಹೋಗಿ ಮಾಡುವುದಾದರೂ ಏನು? ಅಲ್ಲಿ ನೋಡುವುದಾದರೂ ಏನು? ಈಗ ಆ ಸ್ಥಳ ಹೇಗಿದೆಯೋ ಯಾರು ಬಲ್ಲರು? ಚಿಕ್ಕಂದಿನಲ್ಲಿ ಸವಿದ ಸವಿಕ್ಷಣಗಳನ್ನು ಮನದ ಮೂಲೆಯಲ್ಲಿ ನಿಚ್ಚಳವಾಗಿ ಇಟ್ಟುಕೊಂಡ ನೆನಪುಗಳು ಮಬ್ಬಾಗಬಾರದು. ಬಣ್ಣಗೆಡಬಾರದು. ಸುಪ್ತ ಮನಸ್ಸಿನಲ್ಲಿ ಮುದುಡಿಕೊಂಡು ಮಲಗಿದ ಸ್ಮೃತಿಗಳು ತನ್ನಿಂದಾಗಿ ಭಂಗಗೊಂಡರೆ ತನಗೆ ತೊಂದರೆಯಾದೀತೆಂದು ಅವಳು ಅಲ್ಲಿ ಹೋಗಲು ಹಿಂದೇಟು ಹಾಕುತ್ತಿದ್ದಳು. ಆ ಸ್ಥಳವನ್ನು ನೋಡುವ ಉತ್ಸಾಹ ಒಮ್ಮೆಲೇ ಭುಗಿಲೇಳುತ್ತಿತ್ತು. ಅಷ್ಟೇ ಬೇಗ ಅದು ತಣ್ಣಗಾಗುತ್ತಿತ್ತು. ವಿಚಿತ್ರವೆಂದರೆ, ದೈವ ಸಂಕಲ್ಪದಿಂದ ಅವಳ ಅಳಿಯನಿಗೆ ಅದೇ ಪರಿಸರದಲ್ಲಿ ಎರಡು ಮಹಡಿಯ ಸರಕಾರಿ ಬಂಗ್ಲೆಯಂತಹ ಕ್ವಾರ್ಟರ್ಸ್ ವಸತಿಗೆ ಸಿಕ್ಕಿತ್ತು.

ಕೈಕಾಲು ಮುಖ ತೊಳೆದು ಡೈನಿಂಗ್ ಟೇಬಲ್ ಬಳಿ ಚಹ ಹೀರುತ್ತ ಕುಳಿತ ಮಗಳು, 'ಅಮ್ಮಾ, ಇಪ್ಪತ್ತೈದು ವರ್ಷಗಳ ಹಿಂದಿನ ಮಾತು ಬಿಡು. ನಾವು ಬಂದು ಇಲ್ಲಿ ನಿಂತ ನಂತರ ಇಲ್ಲಿರುವ ಸುಂದರ ಬಂಗ್ಲೆಯಂತಹ ಮನೆಗಳನ್ನು ಮುರಿದೊಗೆದು ನಾಲ್ಕೂ ಕಡೆ ಹೈ–ಫೈ ಫ್ಲ್ಯಾಟ್‌ಗಳು ತಲೆಯೆತ್ತಿ ನಿಂತಿವೆ. ಬ್ರಿಟಿಷರ ಕಾಲದಲ್ಲಿ ಪೆನ್‌ಶನರ್‌ರ ಸ್ವರ್ಗವಾಗಿದ್ದು, ಇಲ್ಲಿಯ ಜಲ–ವಾಯು ಅವರಿಗೆ ಒಗ್ಗುವಂತಿದ್ದ ಈ ನಗರ ಇಂದು 'ಎಲೆಕ್ಟ್ರಾನಿಕ್ ಸಿಟಿ'ಯಾಗಿ ಮಾರ್ಪಟ್ಟಿದೆ. ಅದಿಂದು ಐಟಿ ಬಿಟಿ ನಗರವೆಂದು ಪ್ರಸಿದ್ಧವಾಗಿದೆ. ಅಂದಿನ ಆ ನಿರ್ಜನ ಪ್ರದೇಶದಲ್ಲಿ ಇಂದು ವಾಹನಗಳ ದಟ್ಟಣೆಯಿಂದ ಶುದ್ಧ ಹವೆ ಸಿಗುವುದು ದುರ್ಲಭವಾಗಿದೆ. ಪರಿಸರ ಪ್ರದೂಷಣೆಯಲ್ಲಿ ಈ ನಗರ ಉನ್ನತ ಸ್ಥಾನದಲ್ಲಿದೆ. ಈಗ ನೀನೇ ಹೇಳು, ಇಂದು ರಸ್ತೆಯಲ್ಲಿ ಎಷ್ಟು ಪೆನ್‌ಶನ್‌ರರು ಕಾಣುತ್ತಾರೆ?

ನಿಮ್ಮ ಬಾಲ್ಯದ ದಿನಗಳ ಬ್ಯಾಂಗಲೋರ್ ನಗರದ ಕತ್ತು ಹಿಚುಕಿ ಎಂದೋ ಹತ್ಯೆ ಮಾಡಲಾಗಿದೆ. ಹಿಂದೆ ನೀನು ತಂದೆಯೊಂದಿಗೆ ಇರುತ್ತಿದ್ದ ಜಯನಗರ ಇಂದು ಏಶಿಯಾಖಂಡದ ದೊಡ್ಡ ರೆಸಿಡೆನ್ಸಿಯಲ್ ಕಾಲನಿಯಾಗಿದೆ. ಅಜ್ಜನಿಂದ ನಾನು ಇಲ್ಲಿ ಆಗ ಇದ್ದ ಕ್ವಾರ್ಟರ್ಸ್ ಬಗ್ಗೆ ಕೇಳಿದ್ದೆ. ಈ ಮನೆಯಿದ್ದ ಸ್ಥಳದಲ್ಲಿ ಅಥವಾ ಸುತ್ತಮುತ್ತಲೆಲ್ಲೊ ಆ ಕ್ವಾರ್ಟರ್ಸ್‌ಗಳಿದ್ದಿರಬೇಕು. ಯಾಕೆಂದರೆ ಈ ಮನೆಯ ಇನ್ನೊಂದು ಬದಿಯಲ್ಲಿ 'ರೆಚೆಲ್ ಕಾಟೆಜ್' ಇದೆ. ರೆಚೆಲ್ ಕಾಟೆಜ್ ಬಗ್ಗೆ ಸುದತ್ತಾ ನಿನ್ನಿಂದ ಕೇಳಿ ತಿಳಿದುಕೊಂಡಿದ್ದಾಳೆ. ಅದಕ್ಕೇ ಅವಳು 'ಸರ್‌ಪ್ರೈಸ್, ಸರ್‌ಪ್ರೈಸ್' ಅಂತ ಕೂಗಿಕೊಳ್ತಾ ಇದ್ದಳು. ಕಾರಣ ನಿನಗೆ ನಿನ್ನ ಹಿಂದಿನ ನೆನಪು ಮರುಕಳಿಸಬಹುದೆಂದು. ರೆಚೆಲ್ ಕಾಟೆಜಿನ ಹೆಚ್ಚಿನ ಭಾಗ ಮಾರಾಟವಾಗಿ ಹೋಗಿದೆಯೆನ್ನುವುದು ನಿನಗೆ ಗೊತ್ತಿದೆಯೆ

